## ಎಂ.ಸಿ. ಬಂಡಿ ವಕೀಲರ ದತ್ತಿ ಕಾರ್ಯಕ್ರಮ
## ಉಪನ್ಯಾಸ: ಮಾನವ ಹಕ್ಕುಗಳು : ಸ್ಥಿತಿ–ಗತಿ




### ನೈತಿಕತೆ ಮತ್ತು ಬದ್ಧತೆಯ ಕೊರತೆಯಿಂದ ಮಾನವ ಹಕ್ಕುಗಳ ಉಲ್ಲಂಘನೆ : ಲೋಹಿತ ನಾಯ್ಕರ

ಧಾರವಾಡ : ಪ್ರತಿಯೊಬ್ಬ ಮನುಷ್ಯನಿಗೂ ಸಾಮಾಜಿಕ ಪರಿಸರದಲ್ಲಿ ಆತನ ಹುಟ್ಟಿನಿಂದ ನಿಸರ್ಗದತ್ತವಾಗಿ ಬರುವ ಹಕ್ಕುಗಳೆ ಮಾನವ ಹಕ್ಕುಗಳು. ಸಾಮಾಜಿಕ ಲೋಕದಲ್ಲಿ ಮನುಷ್ಯನಿಗೆ ವಿಭಿನ್ನವಾದ ಮತ್ತು ವಿಶೇಷವಾದ ಸಾಮಾಜಿಕ ಸ್ಥಾನ, ಮಾನ, ಘನತೆ, ಗೌರವ, ಸಮ್ಮಾನಗಳಂಥ ವಿಶೇಷ ಹಕ್ಕುಗಳು ಸಹಜವಾಗಿಯೆ ಇವೆ, ಇವುಗಳನ್ನೇ ಸರಳ ಭಾಷೆಯಲ್ಲಿ ಮಾನವ ಹಕ್ಕುಗಳೆಂದು ಕರೆಯಲಾಗುವುದು ಎಂದು ಖ್ಯಾತ ನ್ಯಾಯವಾದಿಗಳು ಹಾಗೂ ಗೌಹಾಟಿ, ಆಸ್ಸಾಂ ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯ ಸಂದರ್ಶಕ ಪ್ರೊಫೆಸರ ಡಾ. ಲೋಹಿತ ನಾಯ್ಕರ ಅಭಿಪ್ರಾಯಪಟ್ಟರು.

ಕರ್ನಾಟಕ ವಿದ್ಯಾವರ್ಧಕ ಸಂಘವು ಶ್ರೀ ಎಂ. ಸಿ. ಬಂಡಿ ವಕೀಲರ ದತ್ತಿ ಅಂಗವಾಗಿ ದಿನಾಂಕ ೨–೬–೨೦೧೯ ರಂದು ಆಯೋಜಿಸಿದ್ದ ಉಪನ್ಯಾಸ ಕಾರ್ಯಕ್ರಮದಲ್ಲಿ ಅತಿಥಿ ಉಪನ್ಯಾಸಕರಾಗಿ **"ಮಾನವ ಹಕ್ಕುಗಳು : ಸ್ಥಿತಿ–ಗತಿ"** ವಿಷಯದ ಕುರಿತು ಅವರು ಮಾತನಾಡಿ, ಮನುಷ್ಯನ ಅವಶ್ಯಕತೆಗಳನ್ನು ಪೂರೈಸುವ ಸಲುವಾಗಿ ಸಾಮಾಜಿಕ ಮತ್ತು ಆರ್ಥಿಕ ವಿಕಸನದ ಜೊತೆಗೆ ಸಾಮಾಜಿಕ ನ್ಯಾಯ ಕೂಡ ಸಿಗಬೇಕು ಎನ್ನುವ ಕಾರಣಕ್ಕಾಗಿಯೇ ಈ ಮಾನವ ಹಕ್ಕುಗಳ ಆಂದೋಲನ ಆರಂಭವಾಗಿದೆ ಎಂದರು.

ಕಾನೂನು ತಜ್ಞರು ಮತ್ತು ಸರಕಾರ ರೂಪಿಸಿದ ಕಾನೂನುಗಳ ಅಡಿಯಲ್ಲಿ ಸಿಗುವ ಹಕ್ಕುಗಳ ಹೊರತಾಗಿ ನಿಸರ್ಗದತ್ತವಾಗಿ ಮನುಷ್ಯನಿಗೆ ಸಿಗುವ ಹಕ್ಕುಗಳು ಮಾನವ ಹಕ್ಕುಗಳು. ಎರಡನೆಯ ಜಾಗತಿಕ ಮಹಾಯುದ್ಧ ಎಲ್ಲ ರಂಗಗಳಿಗೆ ಒಂದು ಹೊಸ ದಿಸೆಯನ್ನು ನೀಡಿದಂತೆ, ಮಾನವ ಹಕ್ಕುಗಳ ಅಂದೋಲನ ಎಂಬ ಚಾರಿತ್ರಿಕ ಮಾನವ ಹಕ್ಕುಗಳ ಸಂರಕ್ಷಣಾ ಹೋರಾಟಕ್ಕೆ ನಾಂದಿ ಹಾಡಿತು. ಎರಡನೆಯ ಜಾಗತಿಕ ಮಹಾಯುದ್ಧದ ನಾಜಿ ಪಡೆಯ ದೌರ್ಜನ್ಯದಿಂದ ಆದ ಸಾವು–ನೋವು–ನಷ್ಟ–ಅವಮಾನಗಳು ಚಿಂತಕರಲ್ಲಿ ವಿಶ್ವಸಂಸ್ಥೆ ಹುಟ್ಟಿಹಾಕಿ ಜಾಗತಿಕ ಶಾಂತಿ ಮತ್ತು ನೆಮ್ಮದಿ ಸ್ಥಾಪಿಸುವುದಕ್ಕೆ ಕಾರಣವಾದಂತೆ, ಎರಡನೆಯ ಜಾಗತಿಕ ಮಹಾಯುದ್ಧದ ನಾಜಿ ಪಡೆಯ ಅಮಾನವೀಯ ದೌರ್ಜನ್ಯದಿಂದಾಗಿ ಮಾನವ ಹಕ್ಕುಗಳ ಜಾಗತಿಕ ಅಂದೋಲನ ಹುಟ್ಟಿಕೊಂಡಿತು. ಅಂದು ವಿಶ್ವಸಂಸ್ಥೆಯು ಮಾನವ ಹಕ್ಕುಗಳ ಘೋಷಣೆ ಮಾಡಿದ ಪರಿಣಾಮವಾಗಿ ಮಾನವ ಹಕ್ಕುಗಳ ಸಂರಕ್ಷಣೆ ಆಗಬೇಕೆಂಬ ಕೂಗು ಪ್ರಾರಂಭವಾಯಿತು ಎಂದು ಡಾ. ಲೋಹಿತ ನಾಯ್ಕರ ಮುಂದುವರೆದು ಮಾತನಾಡುತ್ತ ಹೇಳಿದರು.

ಮುಂದುವರೆದು ಮಾತನಾಡಿದ ಡಾ. ಲೋಹಿತ ನಾಯ್ಕರ, ಕರ್ನಾಟಕದ ವಚನ ಚಳುವಳಿಯ ಸಾರವೂ ಕೂಡ ಮಾನವ ಹಕ್ಕುಗಳ ಸಂರಕ್ಷಣೆಯ ಕೂಗಿನ ಭಾಗವಾಗಿದೆ ಎಂದು ಹೆಮ್ಮೆಯಿಂದ ಹೇಳಬಹುದಾಗಿದೆ. ೧೨ ನೇ ಶತಮಾನದಲ್ಲಿ ಬಸವಾದಿ ಶರಣರು ರಚಿಸಿದ ವಚನಗಳಲ್ಲಿ ಮನುಷ್ಯನನ್ನು ಹೇಗೆ ಗೌರವದಿಂದ ಕಾಣಬೇಕೆಂದು ಹೇಳುತ್ತಲೇ, ದಯವೇ ಧರ್ಮದ ಮೂಲ ಎಂಬ ಮಹಾಮಂತ್ರವನ್ನು ಶರಣ ಚಳುವಳಿ ಜಗತ್ತಿಗೆ ನೀಡಿದೆ. ವಿಪರ್ಯಾಸವೆಂದರೆ ನಾಗರಿಕ ಸಮಾಜ ಎಂದು ನಮ್ಮನ್ನು ನಾವೇ ಬೆನ್ನು ಚಪ್ಪರಿಸಿಕೊಳ್ಳುತ್ತಾ ದಯವೇ ಧರ್ಮದ ಮೂಲ ಎಂಬ ತತ್ವವನ್ನು ಸಮಾಜ ಮರೆತು ಹೋಗಿದ್ದರಿಂದ ಇಂದಿಗೂ ಮಹಿಳೆ, ಮಕ್ಕಳು, ವೃದ್ಧ ತಂದೆ–ತಾಯಿ ಹಾಗೂ ಇತರರ ಮೇಲೆ ದೊಡ್ಡ ಪ್ರಮಾಣದ ದೌರ್ಜನ್ಯ ಮತ್ತು ಶೋಷಣೆಗಳು ನಡೆಯುತ್ತಲೆ ಬಂದಿವೆ. ಕಾನೂನುಗಳ ರಚನೆ ಮತ್ತು ಜಾರಿಯಿಂದ ಮಾನವ ಹಕ್ಕುಗಳನ್ನು ಅಥವಾ ದೌರ್ಜನ್ಯಗಳನ್ನು ನಿಯಂತ್ರಿಸಬಹುದೇ ವಿನಃ ನಿರ್ಮೂಲನೆ ಮಾಡಲು ಸಾಧ್ಯವಿಲ್ಲ. ಇಂಥ ಅನಿಷ್ಟ ಪದ್ಧತಿಗಳು ನಿರ್ಮೂಲನೆ ಆಗಬೇಕಾದರೆ ಸಮಾಜದಲ್ಲಿ ನೈತಿಕತೆ ಮತ್ತು ಸಾಮಾಜಿಕ ಬದ್ಧತೆ ಹೆಚ್ಚಾದಾಗ ಮಾತ್ರ ಸಾಧ್ಯ ಎಂದು ಹೇಳಿದರು.

ಕರ್ನಾಟಕ ಉಚ್ಚನ್ಯಾಯಾಲಯದ ಹಿರಿಯ ಸರಕಾರಿ ವಕೀಲರು ಮತ್ತು ಕರ್ನಾಟಕ ಉಚ್ಚ ನ್ಯಾಯಾಲಯ ಧಾರವಾಡ ಪೀಠದ ವಕೀಲರ ಸಂಘದ ಅಧ್ಯಕ್ಷರೂ ಆದ ಸಿ. ಎಸ್. ಪಾಟೀಲ ಅವರು ಮಾತನಾಡಿ, ನಮ್ಮ ದೇಶ ಭೌಗೋಳಿಕವಾಗಿ ಮತ್ತು ಜನಸಂಖ್ಯೆಯಲ್ಲಿ ದೊಡ್ಡ ದೇಶವಾಗಿದ್ದು ಇಲ್ಲಿ ವೈವಿಧ್ಯಮಯ ಜನಾಂಗವಿದ್ದು, ಇಂದು ಮಾನವ ಹಕ್ಕುಗಳ ಉಲ್ಲಘಂನೆ ಆಗಲು ಇದು ಒಂದು ಪ್ರಮುಖ ಕಾರಣವಾಗಿದೆ. ಅಲ್ಲದೇ ಮನುಷ್ಯ ಹುಟ್ಟಿನಿಂದ ಬಡವ, ಶ್ರೀಮಂತ, ದಲಿತ ಆಗಿರುವುದಿಲ್ಲ. ಸಾಮಾಜಿಕ ತಪ್ಪು ಗ್ರಹಿಕೆ ಮತ್ತು ಭಾವನೆಯಿಂದ ಇಂತಹ ವೈಪರಿತ್ಯ ಸಮಾಜದಲ್ಲಿ ಬೆಳೆದು ಬಂದಿದೆ. ಇದು ಸಮಾಜದ ಅಭಿವೃದ್ಧಿಗೆ ಮತ್ತು ಸಾಮರಸ್ಯಕ್ಕೆ ಮಾರಕವಾಗಿದೆ. ಅಷ್ಟೇ ಅಲ್ಲ

ದೇಶದ ಅಖಂಡತೆ ಮತ್ತು ಏಕತೆಗೆ ಕೂಡಾ ಇಂತಹ ತಪ್ಪು ಹೆಜ್ಜೆ ಧಕ್ಕೆ ಉಂಟು ಮಾಡುವ ಆತಂಕವಿದೆ. ಇವುಗಳೇ ಮಾನವ ಹಕ್ಕುಗಳಾಗಿವೆ, ಇವುಗಳನ್ನು ನಾವು ಅರಿತುಕೊಂಡು ನಾವೆಲ್ಲ ನಮ್ಮ ದೇಶದ ಅಖಂಡತೆ, ಭಾವೈಕತ್ಯೆ ಮತ್ತು ಏಕತೆ ಸಾಧಿಸುವ ಸಲುವಾಗಿ ನಾವೆಲ್ಲ ಒಂದು ಎಂಬ ಭಾವನೆ ನಮ್ಮಲ್ಲಿ ಜಾಗೃತವಾಗಬೇಕಾಗಿದೆ. ಇಂದಿನ ಸ್ಥಿತಿ-ಗತಿಗಳ ಸಂದರ್ಭ ನೋಡಿದಾಗ ನಾವು ಹೆಮ್ಮೆಯಿಂದ ಎಷ್ಟೇ ಬದಲಾವಣೆ ಸಾಧಿಸಿದ್ದೇವೆ ಅಂದರೂ ಮುಂಬೈ, ದೆಹಲಿ ಮುಂತಾದ ದೊಡ್ಡ ಪಟ್ಟಣಗಳಲ್ಲಿಯೇ ನಾಗರಿಕ ಸುಶಿಕ್ಷಿತ ಸಮಾಜದಲ್ಲಿಯೆ ಜಾತಿ ನಿಂದನೆ, ಮಹಿಳೆ ಮತ್ತು ಮಕ್ಕಳ ಮೇಲಾಗುತ್ತಿರುವ ಅತ್ಯಾಚಾರ, ದೌರ್ಜನ್ಯ ದಿನೇ ದಿನೇ ಹೆಚ್ಚುತ್ತಿರುವುದು ಕಂಡು ಬರುತ್ತಿದೆ. ಎಲ್ಲ ರೀತಿಯ ಕಾನೂನುಗಳಿದ್ದರೂ ಕೂಡಾ ಇಂತಹ ವಿಷಮ ಪರಿಸ್ಥಿತಿ ಉಂಟಾಗಿದೆ. ಜನ ಅರ್ಥ ಮಾಡಿಕೊಂಡು ಕಾನೂನನ್ನು ಗೌರವಿಸಿ ಬದುಕಬೇಕಿದೆ ಮತ್ತು ಸಮಾನತೆ ಮೈಗೂಡಿಸಿಕೊಂಡಲ್ಲಿ ಮಾತ್ರ ಸಮಾಜದಲ್ಲಿ ಕಾನೂನು ಸುವ್ಯವಸ್ಥೆ, ಶಾಂತಿಪಾಲನೆ ಹಾಗೂ ಸುಭಿಕ್ಷ್ಯ ಸಮಾಜ ನಿರ್ಮಿಸಲು ಸಾಧ್ಯ ಎಂದು ಅಭಿಪ್ರಾಯಪಟ್ಟರು.

ವೇದಿಕೆಯಲ್ಲಿ ಎಂ. ಸಿ. ಬಂಡಿ ವಕೀಲರು ಹಾಗೂ ಸಂಘದ ಕಾರ್ಯಾಧ್ಯಕ್ಷರಾದ ಶಿವಣ್ಣ ಬೆಲ್ಲದ ಉಪಸ್ಥಿತರಿದ್ದರು. ಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕಾರಿ ಸಮಿತಿ ಸದಸ್ಯರಾದ ಸತೀಶ ತುರಮರಿ ಸ್ವಾಗತಿಸಿದರು. ಶ್ರೀಮತಿ ವಿಶ್ವೇಶ್ವರಿ ಬ. ಹಿರೇಮಠ ನಿರೂಪಿಸಿದರು. ಶಿವಾನಂದ ಭಾವಿಕಟ್ಟಿ ವಂದಿಸಿದರು. ಸಿ. ಎಸ್. ಪೊಲೀಸ ಪಾಟೀಲ ವಕೀಲರು ಶ್ರೀಯುತ ಎಂ. ಸಿ. ಬಂಡಿ ವಕೀಲರಿಗೆ ವಕೀಲ ವೃಂದದ ಪರವಾಗಿ ಜನ್ಮದಿನದ ಶುಭ ಹಾರೈಸಿ ಗೌರವಿಸಿದರು.

ಕಾರ್ಯಕ್ರಮದಲ್ಲಿ ಸಂಘದ ಉಪಾಧ್ಯಕ್ಷರಾದ ನಿಂಗಣ್ಣ ಕುಂಟಿ (ಇಟಗಿ), ಗೌರವ ಉಪಾಧ್ಯಕ್ಷರಾದ ಬಿ. ಎಲ್. ಪಾಟೀಲ, ಕಾರ್ಯಕಾರಿ ಸಮಿತಿ ಸದಸ್ಯರಾದ ಬಸವಪ್ರಭು ಹೊಸಕೇರಿ, ಶ್ರೀಮತಿ ಪೂರ್ಣಿಮಾ ಹೆಗಡೆ (ಉಡಿಕೇರಿ), ಪ್ರೊ. ಹರ್ಷ ಡಂಬಳ, ಎಂ. ಸುದರ್ಶನರಾಜ, ವೀರಣ್ಣ ಒಡ್ಡೀನ, ಶಂಕರಲಿಂಗ ಶಿವಳ್ಳಿ, ಬಿ. ಕೆ. ಹೊಂಗಲ, ರಾಘವೇಂದ್ರ ಕುಂದಗೋಳ, ಮಾಂತೇಶ ನರೇಗಲ್ಲ, ನಾಗಭೂಷಣ ಹಾಗೂ ಬಂಡಿ ವಕೀಲರ ಅಭಿಮಾನಿಗಳು ಸೇರಿದಂತೆ ಅನೇಕರು ಭಾಗವಹಿಸಿದ್ದರು.


**ಶ್ರೀಮತಿ ವಿಶ್ವೇಶ್ವರಿ ಬ. ಹಿರೇಮಠ**

ಕಾರ್ಯಕಾರಿ ಸಮಿತಿ ಸದಸ್ಯರು
ಜೂನ ತಿಂಗಳ ದತ್ತಿ ಕಾರ್ಯಕ್ರಮಗಳ ಸಂಯೋಜಕರು
ಮೊ: ೮೩೧೭೪-೧೬೬೫೪